O.S. 94/2018
P.W.1

**<u>ಸಾಕ್ಷಿಯನ್ನು ದಿನಾಂಕಃ 14-03-2025 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 4 ನೇ ಪ್ರತಿವಾದಿಯ ಪರ ಶ್ರೀ.ಪಿ.ಜೆ.ಜಿ.ವಕೀಲರವರಿಂದಃ</u>**

ನನ್ನ ತಂದೆ ಸಕ್ರಾನಾಯ್ಕು ಊರು ದಾವಣಗೆರೆ ತಾಲೂಕಕಿನ ಆಲನೂರುಹಟ್ಟಿ ಅವರಿಗೆ ನಾನು, ಚಂದ್ರನಾಯ್ಕು ಹಾಗೂ ತಾವ್ರಯಾನಯ್ಕು ಎನ್ನುವ ಮೂರು ಜನ ಮಕ್ಕಳು. ಆಲನೂರಹಟ್ಟಿ ಗ್ರಾಮದಲ್ಲಿ ನಮಗೆ ಸೇರಿದ ಆಸ್ತಿಗಳು ಇವೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಆಸ್ತಿ ಇರುವುದಿಲ್ಲ, ಆದರೆ 2 1/2 ಎಕರೆ ನನ್ನ ಅಣ್ಣನಾದ ತಾವರ್ಯನಾಯ್ಕುನ ಹೆಸರಿನಲ್ಲಿ ಇರುವುದು. ತಾವರ್ಯಾನಾಯ್ಕುನ ಹೆಸರಿಗೆ ಅದು ನನ್ನ ತಂದೆಯಿಂದ ವರ್ಗಾವಣೆಯಾಗಿದ್ದು ಅದು ಪಿತ್ರಾರ್ಜಿತ ಆಸ್ತಿಯಾಗಿರುತ್ತದೆ. ಆಲನೂರಹಟ್ಟಿಯಲ್ಲಿ ನಾನು ವಾಸಿಸುವ ಮನೆಯ ಡೋರ್ ನಂಬರ್ ನನಗೆ ನೆನಪಿರುವುದಿಲ್ಲ. ನಾನು ಬಾಪೂಜಿನಗರದಲ್ಲಿ 15 ವರ್ಷಗಳ ಕಾಲ ವಾಸವಿದ್ದೆನು, ನಾನು ನಂತರ ಬಾಪೂಜಿನಗರವನ್ನು ಬಿಟ್ಟುಹೋಗಿರುತ್ತೇನೆ ಎಂದರೆ ಹೋಗಿ ಬಂದು ಮಾಡುತ್ತೇನೆ. ನಾನು ಬಾಪೂಜಿನಗರದಲ್ಲಿ ಯಾವ ವರ್ಷದಿಂದ ಯಾವ ವರ್ಷದವರೆಗೆ ವಾಸವಿದ್ದೆನು ಎಂದು ನೆನಪಿರುವುದಿಲ್ಲ. ನಾನು ಬಾಪೂಜಿನಗರದಲ್ಲಿ ವಾಸವಿದ್ದೆನು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ಬಾಪೂಜಿನಗರ ವಾಸವಿದ್ದೆನು ಎಂದು ತೋರಿಸಲು ಮತದಾರ ಗುರುತಿನ ಚೀಟಿ, ಮತದಾರ ಪಟ್ಟಿ ಹಾಗೂ ರೇಶನ್ ಕಾರ್ಡ್ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆಧಾರ್ ಕಾರ್ಡ್ ಹಾಜರುಪಡಿಸಿರುವುದಿಲ್ಲ ಎಂದರೆ ಆಗ ಅದು ಇರಲಿಲ್ಲ. ಬಾಪೂಜಿನಗರದಲ್ಲಿ ನಾನು ವಾಸವಾಗಿದ್ದ ಮನೆಯ ಡೋರ್ ನಂಬರ್ ನನಗೆ ನೆನಪಿರುವುದಿಲ್ಲ. ಆ ಮನೆ ನನ್ನ ಹೆಸರಿನಲ್ಲಿ ಇರುವುದು. ಆ ಕುರಿತು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದನ್ನು ಹಾಜರುಪಡಿಸಲು ಸಾಧ್ಯವಿರುವುದಿಲ್ಲ. ನಾನು ಬಾಪೂಜಿನಗರದ ನಿವಾಸಿ ಅಲ್ಲ ಎಂದರೆ ಸರಿಯಲ್ಲ. ಯಾವತ್ತೂ ನಾನು ಅಲ್ಲಿ ವಾಸವಿರಲಿಲ್ಲ ಎಂದರೆ ಸರಿಯಲ್ಲ. ನಾನು ಮೂಲತಃ ದಾವಾಣೆಗೆಗೆ ಅಲನೂರುಹಟ್ಟಿಯ ನಿವಾಸಿ ಎಂದರೆ ಸರಿಯಲ್ಲ. ಈಗಲೂ ಕೂಡ ಅಲ್ಲಿ ವಾಸವಿದ್ದೇನೆ ಎಂದರೆ ಈಗ ಇದ್ದೇನೆ, ಮೊದಲು ಬಾಪೂಜಿ ನಗರದಲ್ಲಿ ಇದ್ದೆ. ನನಗೆ ಜಾಲ್ಯನಾಯ್ಕುನ ಪರಿಚಯವಿರುವುದಿಲ್ಲ. ಬಾಪೂಜಿನಗರದಲ್ಲಿ ಗ್ರಾಮಲೆಕ್ಕಾಧಿಕಾರಿ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ಆತನು ದಾಖಲೆಗಳನ್ನು ಸೃಷ್ಟಿ ಮಾಡುತ್ತಿದ್ದನು ಎಂದು ಆತನ ಮೇಲೆ ಆರೋಪಿ ಇತ್ತು ಎಂದರೆ ಇರಬಹುದು ಆದರೆ ನನಗೆ ಗೊತ್ತಿರುವುದಿಲ್ಲ. ಆ ಬಗ್ಗೆ ವಿಚಾರಣೆ ನಡೆದು ಆತನಿಗೇ ಶಿಕ್ಷೆಯಾಗಿತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿ ಏನು ತಕರಾರು ಹಾಕಿರುತ್ತಾರೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಜಾಲ್ಯಾನಾಯ್ಕುನು ದಾಖಲೆಗಳನ್ನು ನನ್ನ ಹೆಸರಿಗೆ ಸೃಷ್ಟಿಸಿರುವನು ಎಂದು 4 ನೇ ಪ್ರತಿವಾದಿ ತಕರಾರು ಹಾಕಿರುವರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯ ಸರ್ವೆ

ನಂ.162 ಇರುವುದು. ಕ್ಷೇತ್ರ 4 ಎಕರೆ ಇರುವುದು. ನಾರಾಯಣಪುರ ಸರ್ವೆ ನಂ.1 ರ ಒಟ್ಟು ವಿಸ್ತೀರ್ಣ 713-23 ಎಕರೆ ಇರುವುದು ಎಂದರೆ ಸರಿ. ಸರ್ವೆ ನಂ.1/ಪಿ ಕ್ಷೇತ್ರ 1 ಎಕರೆ 70 ಸಂಟ್ಸೆ ಗೆ ಸಂಬಂದಿಸಿದಂತೆ ಪಟ್ಟಾ ಮಂಜೂರಾಗಿರುತ್ತದೆ ಎಂದರೆ ದಾವಾ ಆಸ್ತಿ ಅದು ಬೇರೆ ಬೇರೆ ಆಗಿರುತ್ತದೆ. 4 ನೇ ಪ್ರತಿವಾದಿಯ ಹೆಸರಿಗೆ ಪಟ್ಟಾ ನೀಡಿದ ಜಮೀನಿನ ಪೂರ್ವಕ್ಕೆ - ನಾನ್ಯಾನಾಯ್ಕು ಜಮೀನು ಇದೆ ಎಂದರೆ ಗೊತ್ತಿಲ್ಲ, ಪಶ್ಚಿಮಕ್ಕೆ ಗೋಕಟ್ಟೆ ಇದೆ ಎಂದರೆ ನನಗೆ ಗೊತ್ತಿಲ್ಲ, ಉತ್ತರಕ್ಕೆ -ರಸ್ತೆ ಇದೆ ಎಂದಗೆ ಗೊತ್ತೀಲ್ಲ, ದಕ್ಷಿಣಕ್ಕೆ ಹಾಲಿಬಾಯಿ ಜಮೀನಿಗೆ ಎಂದರೆ ನನಗೆ ಗೊತ್ತಿಲ್ಲ. ಮೇಲೆ ಹೇಳಿದ ಚಕ್ಕುಬಂದಿಯ ನಡುವೆ ಇರುವ ಆಸ್ತಿಯ ಕುರಿತು ನನ್ನ ತಕರಾರು ಇರುವುದಿಲ್ಲ. 1 ಎಕರೆ 70 ಸೆಂಟ್ಸ್ ಜಮೀನಿನಿಂದ 4 ನೇ ಪ್ರತಿವಾದಿಯನ್ನು ಒಕ್ಕಲೆಬ್ಬಿಸಲು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೆಸರಿಗೆ ಆಗಿರುವ ಪಟ್ಟಾ ಜಮೀನನ್ನು ನಾನು ಸರ್ವೆ ಮಾಡಿಸಿರುವುದಿಲ್ಲ. ಸದರಿ 1 ಎಕರೆ 70 ಸೆಂಟ್ಸ್ ಗೆ ಸಂಬಂದಿಸಿದಂತೆ 4 ನೇ ಪ್ರತಿವಾದಿಯ ಹೆಸರಿಗೆ ಪಹಣಿಯಾಗಿರುತ್ತದೆ ಎಂದರೆ ಅದು ಬೇರೆ ಜಮೀನಾಗಿರುತ್ತದೆ. ಸರ್ವೆ ನಂ.162 ಸರ್ಕಾರಿ ಜಮೀನಾಗಿರುವುದಿಲ್ಲ ಎಂದರೆ ಸರಿಯಲ್ಲ. ಜಾಲ್ಯಾನಾಯ್ಕು ಮತ್ತು ನಾನು ಅಣ್ಣ-ತಮ್ಮಂದಿರು ಎಂದರೆ ಸರಿಯಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವತ್ತೂ ಸರ್ವೆ ನಂ.1/ಪಿ 162 ಜಮೀನಿನಲ್ಲಿ ಸ್ವಾದೀನ ಇರಲಿಲ್ಲ ಮತ್ತು ಈಗಾಲೂ ಇಲ್ಲ ಎಂದರೆ ಸರಿಯಲ್ಲ. ನಾನು ಅದನ್ನು ಯಾವತ್ತೂ ಸಾಗುವಳಿ ಮಾಡಿಲ್ಲ ಮತ್ತು ಈವತ್ತೂ ಮಾಡುತ್ತಿಲ್ಲ ಎಂದರೆ ಸರಿಯಲ್ಲ. ನಾನು ಉದ್ದಗಟ್ಟೆ ನಿವಾಸಿ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸರಿಯಿದೆ.**

14-03-2025

**ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ಹರಪನಹಳ್ಳಿ**